# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 49 ಪ್ರಾ.ಸಾ. : 25**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಭೂಪಾಲಪ್ಪ ಲಂಗೋಟಿ |
| ತಂದೆಯ ಹೆಸರು | : | ಭೂಪಾಲಪ್ಪ ಲಂಗೋಟಿ |
| ವಯಸ್ಸು | : | 39 ವರ್ಷ |
| ಕೆಲಸ | : | ಪೊಲೀಸ್ ಪೇದೆ, ಸಿ.ಎನ್ ಪೊಲೀಸ್ ಠಾಣೆ, ಹಾವೇರಿ |
| ವಾಸ | : | ಹಾವೇರಿ |

**ದಿನಾಂಕಃ 19-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2010 ರಿಂದ 2016 ರ ವರೆಗೆ ನಾನು ಕದ್ರಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 15-02-2014 ರಂದು ಬೆಳಿಗ್ಗೆ ನಾನು ಮನೆಯಲ್ಲಿದ್ದಾಗ ಸುಮಾರು ಬೆಳಿಗ್ಗೆ 07-00 ಗಂಟೆಗೆ ಕದ್ರಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಕರೆ ಮಾಡಿ, ರಾಜೀವ ನಗರದಲ್ಲಿ ವೇಲು ಹಾಗೂ ಆತನ ಮಕ್ಕಳ ಕೊಲೆಯಾಗಿದೆ, ನೀವು ಸ್ಥಳಕ್ಕೆ ಹೋಗಿ ವೇಲುವಿನ ಮಗಳಾದ ಅಶ್ವಿನಿಯ ಶವವನ್ನು ಕಾಯುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ಸ್ಥಳಕ್ಕೆ ಹೋಗಿ, ಅಶ್ವಿನಿಯ ಶವದ ಬೆಂಗಾವಲಿಗೆ ಇರುತ್ತೇನೆ. ಅದೇ ರೀತಿ ಚಾಸಾ-47 ರವರು ಸತ್ಯ ನಾರಾಣಯ ಮೂರ್ತಿಯ ಶವದ ಬೆಂಗಾವಲಿಗೆ ಇರುತ್ತಾರೆ. ಚಾಸಾ-48 ರವರು ವೇಲು ರವರ ಶವದ ಬೆಂಗಾವಲಿಗೆ ಇರುತ್ತಾರೆ. ಆ ನಂತರ ತನಿಖಾಧಿಕಾರಿಯಾದ ಚಾಸಾ-57 ರವರು ಸ್ಥಳಕ್ಕೆ ಬಂದು, ಪರಿಶೀಲನೆ ಮಾಡಿ, ಅಶ್ವಿನಿಯ ಶವ ಬಿದ್ದ ಸ್ಥಳವಾದ ಮನೆಯ ಹಾಲ್ ಹಾಗೂ ರಕ್ತ ಚೆಲ್ಲಿದ್ದ ಮನೆಯ ರೂಮ್ ನ ಪಂಚನಾಮೆಯನ್ನು ಮಾಡಿರುತ್ತಾರೆ. ಆ ನಂತರ ವೇಲು ರವರ ಮನೆಯಿಂದ ಕಾಡಿನ ಕಡೆಗೆ ಹೋಗುವ ಕಾಲು ದಾರಿಯಲ್ಲಿ ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು ಹಾಗೂ ಅಲ್ಲಿಂದ ಸ್ವಲ್ಪ ದೂರದಲ್ಲಿ ವೇಲುವಿನ ಶವ ಬಿದ್ದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು. ಸದರಿ ಪಂಚನಾಮೆಯನ್ನು ತನಿಖಾಧಿಕಾರಿಗಳು

ಹಾಗೂ ಪಂಚರು ಹೇಳಿದಂತೆ ಬೆಳಿಗ್ಗೆ 07–30 ರಿಂದ 10–00 ಗಂಟೆಯ ವರೆಗೆ ನಾನು ದಸ್ತುರು ಮಾಡಿರುತ್ತೇನೆ. ಸತ್ಯ ನಾರಾಯಣ ಮೂರ್ತಿ ಹಾಗೂ ವೇಲು ರವರ ಶವ ಬಿದ್ದ ಸ್ಥಳದಲ್ಲಿ ನಾನು ಪಂಚನಾಮೆಯ ದಸ್ತುರು ಮಾಡಲು ಹೋದಾಗ, ನಮ್ಮ ಠಾಣೆಯ ಇತರೇ ಸಿಬ್ಬಂದಿಗಳು ಅಶ್ವಿನಿಯ ಶವದ ಬೆಂಗಾವಲಿಗೆ ಇದ್ದರು. ಪಂಚನಾಮೆ ಮುಗಿದ ನಂತರ ನಾನು ಅಶ್ವಿನಿಯ ಶವದ ಬೆಂಗಾವಲಿಗೆ ಇರುತ್ತೇನೆ. ಸಾಕ್ಷಿ ತಾನು ಬರೆದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ–3 ರಿಂದ 16 ರಂತೆ ಪೋಟೋಗಳನ್ನು ತೆಗೆದರು. ನಿಪಿ–4, 10, 13, 16 ಪೋಟೋದಲ್ಲಿ ಅಶ್ವಿನಿಯ ಶವವನ್ನು, ನಿಪಿ–5, 7, 15 ಪೋಟೋಗಳಲ್ಲಿ ಸತ್ಯ ನಾರಾಯಣ ಮೂರ್ತಿಯ ಶವವನ್ನು, ನಿಪಿ–6 ಮತ್ತು 14 ರಲ್ಲಿ ವೇಲು ರವರ ಶವವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

2. ಪಂಚನಾಮೆಯನ್ನು ಮಾಡಿದ ನಂತರ ತನಿಖಾಧಿಕಾರಿಗಳು ಶವವಗಳನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ತೆಗೆದುಕೊಂಡು ಬರುವಂತೆ ಸೂಚಿಸಿದ ಮೇರೆಗೆ, ನಾವು ಮೂರೂ ಜನರು ಸದರಿ ಮೂರೂ ಶವಗಳನ್ನು ಟಾಟಾ ಏಸ್ ವಾಹನದಲ್ಲಿ ಕಾರವಾರದ ಜಿಲ್ಲಾಸ್ಪತ್ರೆಗೆ ತಂದಿರುತ್ತೇವೆ. ಶವಗಳನ್ನು ಆಸ್ಪತ್ರೆಗೆ ತಂದ ನಂತರ ಅಲ್ಲಿ ತನಿಖಾಧಿಕಾರಿಯಾದ ಚಾಸಾ–57 ರವರು ಅಶ್ವಿನಿ ಹಾಗೂ ವೇಲು ರವರ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ಚಾಸಾ–56 ರವರು ಸತ್ಯ ನಾರಾಯಣ ಮೂರ್ತಿಯ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಅಶ್ವಿನಿ ಹಾಗೂ ವೇಲು ರವರ ಶವ ಪಂಚನಾಮೆಯನ್ನು ನಾನು ತನಿಖಾಧಿಕಾರಿಗಳು ಹಾಗೂ ಪಂಚರು ಹೇಳಿದಂತೆ ದಸ್ತುರು ಮಾಡಿರುತ್ತೇನೆ. ಸಾಕ್ಷಿಯು ತಾನು ಬರೆದ ಶವ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ವೇಲು ರವರ ಶವ ಪಂಚನಾಮೆಯನ್ನು ಈಗಾಗಲೇ ನಿಪಿ–36 ಎಂದು ಗುರುತಿಸಲಾಗಿದ್ದು, ಅಶ್ವಿನಿಯ ಶವ ಪಂಚನಾಮೆಯನ್ನು ನಿಪಿ–67 ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ–57, 58 ಮತ್ತು 60 ಪೋಟೋಗಳಲ್ಲಿ ಅಶ್ವಿನಿಯ ಮೃತ ದೇಹವನ್ನು ಹಾಗೂ ನಿಪಿ–37, 59 ಪೋಟೋಗಳಲ್ಲಿ ವೇಲುವಿನ ಮೃತ ದೇಹವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

3. ಶವ ಪಂಚನಾಮೆ ನಂತರ ತನಿಖಾಧಿಕಾರಿಗಳು ಅಶ್ವಿನಿಯ ಶವ ಪರೀಕ್ಷೆ ಮಾಡಲು ವೈದ್ಯಾಧಿಕಾರಿಗಳಿಗೆ ನಮೂನೆ ನಂಃ 146(I) ಮತ್ತು 146(II) ಗಳನ್ನು ನೀಡಿರುತ್ತಾರೆ. ಆ

ನಂತರ ಆಸ್ಪತ್ರೆಯ ವೈದ್ಯರು ಶವ ಪರೀಕ್ಷೆಯನ್ನು ನಡೆಸಿ, ಅಶ್ವಿನಿಯ ಶವ ಹಾಗೂ ಆಕೆಯ ಮೈ ಮೇಲೆ ಇದ್ದ ಬಟ್ಟೆಗಳನ್ನು ನನ್ನ ವಶಕ್ಕೆ ನೀಡಿರುತ್ತಾರೆ. ತದನಂತರ ನಾನು ಅಶ್ವಿನಿಯ ಶವವನ್ನು ಆಕೆಯ ಚಿಕ್ಕಪ್ಪನಾದ ಚಾಸಾ–30 ಹಾಗೂ ಚಾಸಾ–8 ರವರಿಗೆ ಬಿಟ್ಟುಕೊಟ್ಟಿರುತ್ತೇನೆ ಹಾಗೂ ಆಕೆಯ ಬಟ್ಟೆಗಳನ್ನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ. ಸಾಕ್ಷಿಯು ತಾನು ವೈದ್ಯಾಧಿಕಾರಿಗಳಿಗೆ ನೀಡಿದ ನಮೂನೆ ನಂಃ 146(I) ಮತ್ತು 146(II) ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ–68 ಎಂದು ಗುರುತಿಸಲಾಯಿತು. ಸಾಕ್ಷಿಯು ಅಶ್ವಿನಿಯ ಶವವನ್ನು ಚಾಸಾ–8 ಮತ್ತು 30 ರವರಿಗೆ ಬಿಟ್ಟುಕೊಟ್ಟ ಬಗ್ಗೆ ಸ್ವೀಕೃತಿಗಳನ್ನು (ಪಾವತಿಗಳು) ನೋಡಿ ಗುರುತಿಸಿದ್ದು, ಚಾಸಾ–8 ರವರ ಸ್ವೀಕೃತಿಯನ್ನು ಈಗಾಗಲೇ ನಿಪಿ–43 ಎಂದು ಗುರುತಿಸಲಾಗಿರುತ್ತದೆ. ಚಾಸಾ–30 ರವರ ಸ್ವೀಕೃತಿಯನ್ನು ನಿಪಿ–69 ಎಂದು ಗುರುತಿಸಲಾಯಿತು.

4. ಅಶ್ವಿನಿಯ ಶವವನ್ನು ಹಸ್ತಾಂತರಿಸಿದ ನಂತರ ತನಿಖಾಧಿಕಾರಿಗಳು ನನಗೆ ವೇಲು ರವರ ಮನೆಯ ಬಳಿ ಬರುವಂತೆ ತಿಳಿಸಿದ್ದು, ನಾನು ಅಲ್ಲಿಗೆ ಹೋದಾಗ, ತನಿಖಾಧಿಕಾರಿಗಳು ವೇಲು ರವರ ಮನೆಯಲ್ಲಿದ್ದ 4 ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡಿದ್ದು, ಸದರಿ ಜಪ್ತು ಪಂಚನಾಮೆಯನ್ನು ತನಿಖಾಧಿಕಾರಿಗಳು ಹಾಗೂ ಪಂಚರು ಹೇಳಿದಂತೆ ಬರೆದು ಸಹಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ಬರೆದ ಮೊಬೈಲ್ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–20(ಸಿ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯ ನಂತರ ನಾನು ಠಾಣೆಗೆ ಹಿಂದಿರುಗಿ ಅಶ್ವಿನಿಯ ಬಟ್ಟೆಗಳನ್ನು ತನಿಖಾಧಿಕಾರಿಯಾದ ಚಾಸಾ–57 ರವರ ಮುಂದೆ ಹಾಜರುಪಡಿಸಿದ್ದು, ಅವರು ಸದರಿ ಬಟ್ಟೆಗಳನ್ನು ಪಂಚರ ಸಮಕ್ಷಮ ರಾತ್ರಿ 07–30 ರಿಂದ 08–00 ಗಂಟೆಯ ವರೆಗೆ ಜಪ್ತು ಪಡಿಸಿಕೊಂಡಿರುತ್ತಾರೆ. ಬಟ್ಟೆಗಳನ್ನು ಜಪ್ತು ಪಡಿಸಿಕೊಂಡ ಪಂಚನಾಮೆಯನ್ನು ನಾನು ಬರೆದು, ಸಹಿ ಮಾಡಿ, ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–21 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–21(ಸಿ) ಎಂದು ಗುರುತಿಸಲಾಯಿತು. ಅಶ್ವಿನಿಯ ಬಟ್ಟೆಗಳಾದ ಮುದ್ದೆ ಮಾಲು–14 ಫ್ರಾಕ್, ಮುದ್ದೆ ಮಾಲು–15 ಒಳ ಫ್ರಾಕ್, ಮುದ್ದೆ ಮಾಲು–16 ಚಡ್ಡಿಯನ್ನು

ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಮೇಲೆ ಹೇಳಿದಂತೆ ನಾನು ತನಿಖೆಗೆ ಸಹಾಯ ಮಾಡಿದ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

5. ನಿಪಿ–21 ಪಂಚನಾಮೆಯ ನಂತರ ಚಾಸಾ–47 ರವರು ತಂದಿದ್ದ, ಸತ್ತ ನಾರಾಯಣ ಮೂರ್ತಿಯ ಬಟ್ಟೆಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ರಾತ್ರಿ 08–00 ರಿಂದ 08–45 ಗಂಟೆಯ ವರೆಗೆ ಜಪ್ತು ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನೂ ಸಹ ನಾನು ಬರೆದು, ಸಹಿ ಮಾಡಿ, ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–23(ಸಿ) ಎಂದು ಗುರುತಿಸಲಾಯಿತು.

6. ದಿಃ 16–02–2014 ರಂದು ಚಾಸಾ–50 ಮತ್ತು 51 ರವರ ಗೋವಾದ ಬಾಂಬೋಲಿಂ ಆಸ್ಪತ್ರೆಯಿಂದ ಮೃತ ವೇಲು ರವರ ಹೆಂಡತಿಯಾದ ಚಾಸಾ–22 ಜಾನಕಿ ರವರ ಬಟ್ಟೆಗಳನ್ನು ತಂದು ಹಾಜರುಪಡಿಸಿದ್ದು, ಆ ಬಟ್ಟೆಗಳನ್ನು ತನಿಖಾಧಿಕಾರಿಗಳು ಜಪ್ತು ಪಡಿಸಿಕೊಂಡಿದ್ದು, ಸದರಿ ಜಪ್ತು ಪಂಚನಾಮೆಯನ್ನು ತನಿಖಾಧಿಕಾರಿಗಳು ಹಾಗೂ ಪಂಚರು ಹೇಳಿದಂತೆ ಬರೆದು ಸಹಿ ಮಾಡಿ, ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–45(ಸಿ) ಎಂದು ಗುರುತಿಸಲಾಯಿತು.

7. ದಿಃ 18–02–2024 ರಂದು ಆರೋಪಿಯನ್ನು ಠಾಣೆಯಲ್ಲಿ ದಸ್ತಗಿರಿ ಮಾಡಿದ್ದು, ಆ ಸಮಯದಲ್ಲಿ ಆತನು ನೀಡಿದ ಸ್ವ ಇಚ್ಛಾ ಹೇಳಿಕೆಯ ಮೇರೆಗೆ, ತನಿಖಾಧಿಕಾರಿಗಳು 2 ಜನ ಪಂಚರು ಹಾಗೂ ಸಿಬ್ಬಂದಿಯನ್ನು ಹಾಗೂ ಆರೋಪಿಯನ್ನು ಘಟನಾ ಸ್ಥಳಗಳಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿಯು ತಾನು ಬಚ್ಚಿಟ್ಟಿದ್ದ ವಸ್ತುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಜಪ್ತು ಪಡಿಸಿಕೊಳ್ಳುವ ಕಾಲಕ್ಕೆ ಹಾಗೂ ಆತ ಕೊಲೆ ಮಾಡಿದ ಸ್ಥಳಗಳನ್ನು ತೋರಿಸಿದ ಸ್ಥಳ ಹಾಗೂ ಆತ ಕೊಲೆ ಮಾಡುವ ಪೂರ್ವದಲ್ಲಿ ಕತ್ತಿಯನ್ನು ಬಚ್ಚಿಟ್ಟ ಸ್ಥಳ ಎಂದು ತೋರಿಸಿದ ಮೇರೆಗೆ, ಅಲ್ಲಿ ತನಿಖಾಧಿಕಾರಿಗಳು ಹಾಗೂ ಪಂಚರು ಹೇಳಿದಂತೆ ಪಂಚನಾಮೆಯನ್ನು ಬರೆದು, ಸಹಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–24 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–24(ಸಿ) ಎಂದು ಗುರುತಿಸಲಾಯಿತು. ನಿಪಿ–

24 ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ–25 ರಿಂದ 35 ರ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

8. 2014 ರಲ್ಲಿ ನಾನು ಕದ್ರಾದ ಕೆ.ಪಿ.ಸಿ ಕಾಲೋನಿಯಲ್ಲಿ ವಾಸವಾಗಿರುತ್ತೇನೆ. ನನ್ನ ಮನೆಯಿಂದ ಮೃತ ವೇಲು ರವರ ಮನೆ 2 ಕಿ.ಮೀ ದೂರದಲ್ಲಿರುತ್ತದೆ. ನಾನು ವೇಲು ರವರ ಮನೆಯ ಬಳಿ ಹೋದಾಗ ಅಶ್ವಿನಿಯ ಶವದ ಬೆಂಗಾವಲಿಗೆ ನಮ್ಮ ಸಿಬ್ಬಂದಿಯಾದ ಚರಣ್ ರವರು ಇದ್ದರು, ಮತ್ತೆ ಯಾರು ಸಿಬ್ಬಂದಿಗಳು ಇರುವುದಿಲ್ಲ. ಅಲ್ಲಿ ಸುಮಾರು 40–50 ಜನರು ಸೇರಿದ್ದರು. ನಿಪಿ–1 ಸ್ಥಳ ಪಂಚನಾಮೆಯನ್ನು ಬರೆದಾಗ ಹಾಜರಿದ್ದ ಪಂಚರು ಕದ್ರಾ, ರಾಜೀವನಗರ ಹಾಗೂ ಬಾಳೆ ಮನೆಯ ವಾಸಿಗಳು. ನಿಪಿ–3 ರಿಂದ 16 ಪೋಟೋಗಳಲ್ಲಿ ನಾನು ಪಂಚನಾಮೆಯನ್ನು ಬರೆಯುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ. ಸದರಿ ಪೋಟೋಗಳನ್ನು ಸ್ಥಳ ಪಂಚನಾಮೆಯ ಕಾಲಕ್ಕೆ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ–1 ಸ್ಥಳ ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

9. ದಿಃ 15–02–2014 ರಂದು ಬೆಳಿಗ್ಗೆ ಸ್ಥಳಕ್ಕೆ ಬಂದ ತನಿಖಾಧಿಕಾರಿಯವರು ಸಾರ್ವಜನಿಕರಲ್ಲಿ ವಿಚಾರಣೆ ಮಾಡಿರುತ್ತಾರೆ. ನಾವು ಶವಗಳನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–67 ಶವ ಪಂಚನಾಮೆಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಅಶ್ವಿನಿಯ ಶವ ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ–57, 58 ಮತ್ತು 60 ಪೋಟೋಗಳಲ್ಲಿ ನಾನು ಕಾಣಿಸುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ–36 ಶವ ಪಂಚನಾಮೆಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ–36 ಶವ ಪಂಚನಾಮೆಯನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ತನಿಖಾಧಿಕಾರಿಗಳು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ನಿಪಿ–20 ರಂತೆ ಮೊಬೈಲ್ ಜಪ್ತು ಪಂಚನಾಮೆ, ನಿಪಿ–21 ರಂತೆ ಅಶ್ವಿನಿಯ ಬಟ್ಟೆ ಜಪ್ತು ಪಂಚನಾಮೆ, ನಿಪಿ–45 ರಂತೆ ಜಾನಕಿಯ ಬಟ್ಟೆ ಜಪ್ತು ಪಂಚನಾಮೆಯನ್ನು ಬರೆದು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ–24 ಆರೋಪಿತನ ಸ್ವ ಖುಷಿ ಹೇಳಿಕೆಯ ಮೇರೆಗೆ ವಸ್ತುಗಳನ್ನು ಜಪ್ತು ಪಡಿಸಿಕೊಂಡ ಬಗ್ಗೆ ಹಾಗೂ ಸ್ಥಳಗಳ ಪಂಚನಾಮೆಯನ್ನು ಬರೆದು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–

20, 21, 45, 24 ರಂತೆ ಯಾವುದೆ ಪಂಚನಾಮೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–25 ರಿಂದ 35 ಪೋಟೋಗಳಲ್ಲಿ ನಾನು ಪಂಚನಾಮೆಯನ್ನು ಬರೆಯುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ. ತನಿಖಾಧಿಕಾರಿಗಳ ಮಾತು ಕೇಳಿ, ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ